## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 60(92)
**ಸದಸ್ಯರ ಹೆಸರು** : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 12-09-2022
**ಉತ್ತರಿಸುವ ಸಚಿವರು** : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಸರ್ಕಾರಿ ಹಿರಿಯ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ, ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ನೀಡುವ ಕುರಿತು ಸರ್ಕಾರದ ನಿಲುವೇನು; ಈ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | 2008 ರಿಂದ ದೈಹಿಕ ಶಿಕ್ಷಣ ವಿಷಯವನ್ನು ಪಠ್ಯ ವಿಷಯವಾಗಿ 06 ರಿಂದ 09ತರಗತಿಯವರೆಗೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಜಾರಿಗೊಳಿಸಿ ಮತ್ತು ಮೌಲ್ಯಮಾಪನಕ್ಕೆ ಒಳಪಡಿಸಲಾಗಿದೆ. 2012-13 ನೇ ಸಾಲಿನಲ್ಲಿ 10 ನೇ ತರಗತಿಗೂ ದೈಹಿಕ ಶಿಕ್ಷಣ ವಿಷಯವನ್ನು ಪಠ್ಯ ವಿಷಯವಾಗಿ ಜಾರಿಗೊಳಿಸಲಾಗಿದೆ. ಪ್ರಸ್ತುತ, 06 ರಿಂದ 09 ತರಗತಿಯವರೆಗೆ ದೈಹಿಕ ಶಿಕ್ಷಣ ವಿಷಯವನ್ನು ಭಾಗದಲ್ಲಿ 'ಎ' ಬೋಧಿಸಲಾಗುತ್ತಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 43 ಟಿಪಿಯು 2018 ದಿನಾಂಕ: 09-10-2019ರಂತೆ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನ ಸಂಹಿತೆ, ಮುಂತಾದವು) (ತಿದ್ದುಪಡಿ) ನಿಯಮಗಳು 2019ನ್ನು ಅಧಿಸೂಚಿಸಿದ್ದು, ಇದರನ್ವಯ ಪ್ರಥಮ ಮತ್ತು ದ್ವಿತೀಯ ಪಿಯುಸಿ ಪದವಿ ಪೂರ್ವ ತರಗತಿ ಸೇರಿ 120 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜಿಗೆ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಹೊಂದಲು ಅವಕಾಶ ಕಲ್ಪಿಸಿರುತ್ತದೆ.<br><br>ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯಾಬಲ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಒಟ್ಟು 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡಿದ್ದು, ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.<br><br>120 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯಾಬಲ ಹೊಂದಿರುವ 665 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವನೆ ಸ್ವೀಕೃತವಾಗಿದ್ದು ಮಿತವ್ಯಯದ ದೃಷ್ಟಿಯಿಂದ ಪ್ರಸ್ತಾವನೆಯನ್ನು ಒಪ್ಪಿರುವುದಿಲ್ಲ.<br><br>ಪ್ರಸ್ತುತ ಮಂಜೂರಾಗಿರುವ 20 ದೈಹಿಕ ಶಿಕ್ಷಣ ಉಪನ್ಯಾಸಕರ |

<table>
<tr>
<td></td>
<td></td>
<td>ಹುದ್ದೆಗಳೆಲ್ಲವೂ ಖಾಲಿಯಿದ್ದು, ಇದರಲ್ಲಿ 10 ನೇರ ನೇಮಕಾತಿ ಮೂಲಕ ಭರ್ತಿಗಾಗಿ ದಿನಾಂಕ; 18-11-2021ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಉಳಿದ 10 ಹುದ್ದೆಗಳ ಬಡ್ತಿ ಮೂಲಕ ಭರ್ತಿ ಮಾಡಲು ಅರ್ಹ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ವ್ಯಕ್ತಿಪೂರ್ವೋತ್ತರ ದಸ್ತಾವೇಜುಗಳ ಪರಿಶೀಲನೆ ಪ್ರಗತಿಯಲ್ಲಿದೆ.</td>
</tr>
<tr>
<td>ಆ.</td>
<td>ಈ ವಿಷಯವನ್ನು ಬೋಧಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರ/ ಉಪನ್ಯಾಸಕರ ಸಂಖ್ಯೆ; ಅವಶ್ಯಕತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು; ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು; ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು ಖಾಲಿ ಇರುವ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಯಾವಾಗ ಮಾಡಲಾಗುವುದು ಈ ಹಿಂದೆ ಯಾವಾಗ ನೇಮಕ ಮಾಡಿಕೊಳ್ಳಲಾಗಿತ್ತು.</td>
<td>ಪ್ರಾಥಮಿಕ ಶಾಲೆ<br>ಪ್ರಾಥಮಿಕ ಸರ್ಕಾರಿ ಶಾಲೆಗಳಿಗೆ ಮಂಜೂರಾದ ಒಟ್ಟು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್ -2 ಹುದ್ದೆಗಳ ಸಂಖ್ಯೆ 6772.
<ul>
<li>2021-22 ನೇ ಸಾಲಿನ ಹುದ್ದೆಗಳ ಸಮರ್ಪಕ ಮರು ಹೊಂದಾಣಿಕೆಯಂತೆ (Rationalisation) 3596 ಅವಶ್ಯಕತೆ ಕಂಡು ಬಂದಿರುತ್ತದೆ.</li>
<li>ಮಂಜೂರಾದ ಖಾಲಿ ಹುದ್ದೆಗಳ ಪೈಕಿ ಪ್ರಸ್ತುತ ಖಾಲಿ ಹುದ್ದೆಗಳ ಸಂಖ್ಯೆ -2120.</li>
<li>ಖಾಲಿ ಇರುವ 2,120 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.</li>
</ul>
ಪ್ರೌಢಶಾಲೆ
<table>
<tr><td>ದೈಹಿಕ ಶಿಕ್ಷಕರ ಹುದ್ದೆ ಮಂಜೂರಾತಿ</td><td>: 5187</td></tr>
<tr><td>ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ</td><td>: 3762</td></tr>
<tr><td>ಖಾಲಿ ಹುದ್ದೆಗಳ ಸಂಖ್ಯೆ</td><td>: 1432 (07 ಹೆಚ್ಚುವರಿ ಹುದ್ದೆಗಳೂ ಸೇರಿದಂತೆ)</td></tr>
</table>
ಪದವಿ ಪೂರ್ವ ಶಿಕ್ಷಣ ಇಲಾಖೆ
<ul>
<li>ಒಟ್ಟು 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಮಂಜೂರಾಗಿರುತ್ತದೆ.</li>
<li>2019-20ನೇ ಸಾಲಿನಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯಾಬಲದನ್ವಯ ಒಟ್ಟು 685 ದೈಹಿಕ ಶಿಕ್ಷಣ ಉಪನ್ಯಾಸಕರ ಅವಶ್ಯಕತೆ ಇರುತ್ತದೆ.</li>
<li>ಕಾರ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಖ್ಯೆ:00</li>
<li>ಖಾಲಿಯಿರುವ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳ ಸಂಖ್ಯೆ: 20</li>
<li>ಪ್ರಸ್ತುತ ಖಾಲಿಯಿರುವ 20 ದೈಹಿಕ ಶಿಕ್ಷಣ ಉಪನ್ಯಾಕರ ಹುದ್ದೆಗಳ ಪೈಕಿ, 10 ನೇರ ನೇಮಕಾತಿ ಮೂಲಕ ಭರ್ತಿಗಾಗಿ ದಿ:18-11-2021ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.</li>
<li>10 ಹುದ್ದೆಗಳ ಬಡ್ತಿ ಮೂಲಕ ಭರ್ತಿಗಾಗಿ ಸಾರ್ವಜನಿಕ</li>
</ul>
</td>
</tr>
</table>

| | | |
|---|---|---|
| | | ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರಿಂದ ವ್ಯಕ್ತಿಪೂರ್ವೋತ್ತರ ದಸ್ತಾವೇಜುಗಳನ್ನು ಕೋರಲಾಗಿದ್ದು, ಶೀಘ್ರವಾಗಿ ಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು.<br>• ಈ ಹಿಂದೆ ಯಾವುದೇ ನೇಮಕಾತಿ ಮಾಡಿಕೊಳ್ಳಲಾಗಿರುವುದಿಲ್ಲ. |
| ಇ. | ಶಿಕ್ಷಕರ ನೇಮಕಾತಿಯು ಎಷ್ಟು ವಿದ್ಯಾರ್ಥಿಗಳ ಸಂಖ್ಯೆಗೆ ಒಬ್ಬ ಶಿಕ್ಷಕರ ನೇಮಕಾತಿ ಮಾಡಲಾಗುತ್ತಿದೆ;<br>(ವಿದ್ಯಾರ್ಥಿ/ಶಿಕ್ಷಕರ ಅನುಪಾತದ ವಿವರ ನೀಡುವುದು) | **ಪ್ರಾಥಮಿಕ ಶಾಲೆ**<br><br>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 200 ಕ್ಕಿಂತ ಹೆಚ್ಚಿರುವ ಶಾಲೆಗಳಿಗೆ ದೈಹಿಕ ಶಿಕ್ಷಕರ ಹುದ್ದೆಯನ್ನು ಲಭ್ಯಪಡಿಸಲಾಗಿರುತ್ತದೆ. ಒಂದು ವೇಳೆ ತಾಲ್ಲೂಕಿನಲ್ಲಿ 200 ವಿದ್ಯಾರ್ಥಿಗಳಿರುವ ಹಿರಿಯ ಪ್ರಾಥಮಿಕ ಶಾಲೆಗಳು ಲಭ್ಯವಿಲ್ಲದೇ ಇದ್ದಲ್ಲಿ ಇಳಿಕೆ ಕ್ರಮಾಂಕದಲ್ಲಿ ದೈಹಿಕ ಶಿಕ್ಷಕರ ಹುದ್ದೆಯನ್ನು ನೀಡಲಾಗುತ್ತಿದೆ.<br><br>**ಪ್ರೌಢಶಾಲೆ**<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 69 ಎಲ್‌ಬಿಪಿ 2011 ಬೆಂಗಳೂರು 01.04.2011ರ ಆದೇಶದ ರಿತ್ಯಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೆ.ಪಿ.ಎಸ್, ಮತ್ತು ಆದರ್ಶ ವಿದ್ಯಾಲಯಗಳನ್ನು ಹೊರತುಪಡಿಸಿ ಉಳಿದೆಲ್ಲಾ ಶಾಲೆಗಳಲ್ಲಿ 70 ವಿದ್ಯಾರ್ಥಿಗಳಿಗೆ 1 ವಿಭಾಗ ನಿಗಧಿಪಡಿಸಲಾಗಿದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 04 ಯೋಸಾಕ 2017 ಬೆಂಗಳೂರು ದಿನಾಂಕ: 05.01.2018ರ ಆದೇಶದ ರೀತ್ಯಾ ಕೆ.ಪಿ.ಎಸ್. ಮತ್ತು MHRD ನಿರ್ದೇಶನದಂತೆ ಆದರ್ಶ ವಿದ್ಯಾಲಯಗಳಲ್ಲಿ 40 ವಿದ್ಯಾಥಿಗಳಿಗೆ 01 ವಿಭಾಗ ನಿಗಧಿಪಡಿಸಲಾಗಿದೆ . ಸರ್ಕಾರದ ಆದೇಶ ಸಂಖ್ಯೆ ಇಪಿ 14 ಎಲ್ ಬಿಪಿ 2022 ದಿನಾಂಕ:03/09/2022 ರ ಆದೇಶದಲ್ಲಿ ವಿವಿಧ ವೃಂದಗಳ ಒಟ್ಟು 2500 ಶಿಕ್ಷಕರುಗಳ ಹುದ್ದೆಗಳನ್ನು ಅನುಮತಿ ನೀಡಿರುವ 15000 ಜಿಪಿಎಸ್‌ಟಿ ನೇಮಕಾತಿಯಲ್ಲಿ ಭರ್ತಿಯಾಗದೇ ಖಾಲಿ ಉಳಿದ ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ದೈಹಿಕ ಶಿಕ್ಷಕರ ಖಾಲಿ ಇರುವ 200 ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ನೇರ ನೇಮಕಾತಿ ಮೂಲಕ ಭರ್ತಿ ಕ್ರಮವಹಿಸಲಾಗಿದೆ.<br>**ಪದವಿ ಪೂರ್ವ ಶಿಕ್ಷಣ ಇಲಾಖೆ.**<br>ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 43 ಟಿಪಿಯು 2018 ದಿ: 09-10-2019ರಂತೆ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನ ಸಂಹಿತೆ, ಮುಂತಾದವು) (ತಿದ್ದುಪಡಿ) ನಿಯಮಗಳು 2019ನ್ನು ಅಧಿಸೂಚಿಸಿದ್ದು, ಇದರನ್ವಯ ಪ್ರಥಮ ಮತ್ತು ದ್ವಿತೀಯ ಪಿಯುಸಿ ಪದವಿ ಪೂರ್ವ ತರಗತಿ ಸೇರಿ 120 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜಿಗೆ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಹೊಂದಲು ಅವಕಾಶ ಕಲ್ಪಿಸಿರುತ್ತದೆ. (ಅನುಬಂಧ-1) |
| ಈ. | ಸದರಿ ದೈಹಿಕ ಶಿಕ್ಷಣ ಶಿಕ್ಷಕರ / ಉಪನ್ಯಾಸಕರ ವೃಂದ ಮತ್ತು ನೇಮಕಾತಿಯ ತಿದ್ದುಪಡಿ ಕಾರ್ಯ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯೊಳಗೆ ಇದನ್ನು | ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಕ್ರಮ ಜಾರಿಯಲ್ಲಿರುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 35 ಡಿಜಿಏ 2009 ದಿ:15-05-2014ರ ಸಮಗ್ರ ಪುನರಾವಲೋಕನ ವೃಂದ ಮತ್ತು ನೇಮಕಾತಿ |

| | | |
|---|---|---|
| | ಪೂರ್ಣಗೊಳಿಸಲಾಗುವುದು. | ನಿಯಮಗಳನ್ವಯ ಒಟ್ಟು 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳ ಮಂಜೂರಾತಿ ಇರುತ್ತದೆ. ಮಂಜೂರಾದ ಹುದ್ದೆಗಳಲ್ಲಿ ಶೇಕಡಾ 50 ರಷ್ಟನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು, ಶೇಕಡ 50 ರಷ್ಟನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರೇಡ್-1 ದೈಹಿಕ ಶಿಕ್ಷಕರಿಗೆ ಬಡ್ತಿ ನೀಡುವ ಮೂಲಕ ಭರ್ತಿಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಉ. | ಪ್ರಸ್ತುತ ಶಾಲಾ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿ ಇದ್ದಲ್ಲಿ ಆ ವಿಷಯವನ್ನು ಬೋಧನೆ ಮಾಡುತ್ತಿರುವ ಬೋಧಕರು ಯಾರು; ಹೇಗೆ ನಿರ್ವಹಣೆ ಮಾಡಲಾಗುತ್ತಿದೆ? | ದೈಹಿಕ ಶಿಕ್ಷಕರು ಇಲ್ಲದ ಶಾಲೆಗಳಲ್ಲಿ ವಿದ್ಯಾರ್ಥಿಗಳ ದೈಹಿಕ ಶಿಕ್ಷಣದ ಸಾಮರ್ಥ್ಯವನ್ನು ಬಲಪಡಿಸುವ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರುಗಳ ಸೇವೆಯನ್ನು ವಾರದಲ್ಲಿ 03 ದಿನ ಮೂಲ ಶಾಲೆಯಲ್ಲಿ ಹಾಗೂ 03 ದಿನ ಕ್ಲಸ್ಟರ್ ಹಂತದ ಸ್ಥಳೀಯ ಹತ್ತಿರದ ಶಾಲೆಗಳಿಗೆ ನಿಯೋಜಿಸಲು ಕ್ರಮವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ.<br><br>**ಪ್ರೌಢಶಾಲೆ**<br><br>ಪ್ರೌಢಶಾಲೆ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿ ಇರುವ ಶಾಲೆಗಳಿಗೆ ತಾಲ್ಲೂಕಿನಲ್ಲಿ ಕಡಿಮೆ ಕಾರ್ಯಬಾರವಿರುವ ಹತ್ತಿರದ ಶಾಲೆಯಿಂದ ವಾರಕ್ಕೆ ಎರಡು ಅಥವಾ ಮೂರು ದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಉಪನಿರ್ದೇಶಕರ ಹಂತದಲ್ಲಿ ನಿಯೋಜನೆ ಮಾಡಿ ಬೋದನೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದು, ಬೋಧನೆ ಮಾಡುತ್ತಿರುವ ಬೋಧಕರು ಯಾರು ಇರುವುದಿಲ್ಲ, ಸದರಿ ಹುದ್ದೆಗಳ ಭರ್ತಿಗಾಗಿ ಕ್ರಮವಹಿಸಲಾಗಿದೆ. |

**ಸಂಖ್ಯೆ: ಇಪಿ 51 ಪಿಎಂಎ 2022**

**(ಬಿ.ಸಿ. ನಾಗೇಶ್)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**

**ಹಾಗೂ ಸಕಾಲ ಸಚಿವರು**

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-IVA | ಬೆಂಗಳೂರು,, ಬುಧವಾರ, ಅಕ್ಟೋಬರ್ ೦೯, ೨೦೧೯ (ಆಶ್ವಯುಜ ೧೭, ಶಕ ವರ್ಷ ೧೯೪೦) | ನಂ. ೮೩೮ |
|---|---|---|
| *Part–IVA* | *Bengaluru, Wednesday, October 09, 2019 (Ashwayuja 17, Shaka Varsha 1940)* | *No. 838* |

**EDUCATION SECRETARIAT**

**NOTIFICATION**

**No. ED 43 TPU 2018, Bengaluru, dated: 09-10-2019**

Whereas the draft of the Karnataka Pre-University Education (Academic, Registration, Administration and Grant-in-aid etc.,) (Amendment) Rules, 2019 was published as required by sub-section (1) of section 145 of the Karnataka Education Act, 1983 (Karnataka Act 1 of 1995) in Notification No. ED 43 TPU 2018 dated 3rd August 2019 in part-4A of the Karnataka Gazette dated 3rd August 2019 inviting objections and suggestions from all persons likely to be affected thereby within thirty days from the date of its publication in the official Gazette.

And whereas no objections and suggestions were received by the Government within the specified period.

And whereas the objections and suggestions received within the period specified above, have been considered by the Government.

Now therefore in exercise of the powers conferred by sub-section (1) of the section 145 of the Karnataka Education Act, 1983 (Karnataka Act 1 of 1995),the Government of Karnataka hereby makes the following rules, namely:-

**RULES**

**1.Title and commencement.-** (1) These rules may be called the Karnataka Pre-University Education (Academic, Registration, Administration and Grant-in-aid etc.,) (Amendment) Rules, 2019.

(2) They shall come into force from the date of their publication in the official Gazette.

**2.Amendment of rule 14.-** In the Karnataka Pre-University Education (Academic, Registration, Administration and Grant-in-aid etc.,) Rules, 2006, in rule 14, in sub-rule (1), in clause (e), for figures and word "100 students", the figures and word "120 students" shall be substituted.

By order and in the name of Governor of Karnataka

**Shekhara**
Under Secretary to Government,
Education Department (Pre-University Education)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 250